ಕೊಡುವ ವಿಚಾರದಲ್ಲಿ ಹಿಂದೆ ಮಾನ್ಯ ಚನ್ನಬಸಪ್ಪನವರು ಮಂತ್ರಿಯಾಗಿದ್ದಾಗ ಆಶ್ವಾಸನೆ ಕೂಡ ಕೊಟ್ಟಿದ್ದರು. ಕಳೆದ ೧೫ ದಿವಸಗಳಿಂದ ಪ್ರವಾಹ ಬತ್ತಿ ಹೋಗಿ, ಭತ್ತ, ಅಡಿಕೆ ಹಾಗೂ ತೆಂಗಿನ ಬೆಳೆಗೆ ವಿಪರೀತವಾಗಿ ಹಾನಿಯಾಗಿ ಲಕ್ಷಾಂತರ ರೂಪಾಯಿ ನಷ್ಟ ಸಂಭವಿಸಿದೆ. ಜೆಕ್ಕಾನದಿಯಿಂದ ಸಾಕಷ್ಟು ನೀರನ್ನು ಕುಂದಾಪುರ ತಾಲ್ಲೂಕಿಗೆ ಬಿಡುವುದಕ್ಕೆ ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಮಾನ್ಯ ಸದಸ್ಯರ ಜೊತೆಯಲ್ಲಿಯೇ ಕೂತು ಚರ್ಚೆ ಮಾಡಿ, ಅಧಿಕಾರಿಗಳನ್ನು ಕರೆಸಿ, ಅವರು ಏನು ಪರಿಹಾರ ಸೂಚಿಸುತ್ತಾರೋ ಅದನ್ನು ಲಭ್ಯವಿದ್ದರೆ ಮಾಡಿ ಕೊಡುತ್ತೇನೆ.

(XVIII) Demands of the employees ot Land Records Dept. Bidar.

SRI MOHAMED LIAQUDDIN BURANUDDIN.– Mr. Speaker, Sir, The, employees of Land Records Department, Bidar are pressing their demands for settlement of cadres and promotions. The Government has not finalised the seniority list of technical personnel of the department nor it has given promotions in that cadre for the past several employees. As a result of it there is stagnation in service of several employees. In order to press their demands, the employees of Dy. Director of Land Records, Bidar have gone on pen down strike. Due to their strike the work of general public has become stand still. You are therefore, requested to solve the problems of the public and also the grievances of the employees which will have to be settled on principles of justice and equity as they have given notice to go on hunger strike if their problems are not solved.

ಶ್ರೀ ಎಸ್. ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೆ ಈಗಾಗಲೇ ಸರ್ಕಾರ ಇದರ ಬಗ್ಗೆ ಉತ್ತರ ಹೇಳಿದೆ. ಸರ್ಕಾರಿ ನೌಕರರು ಆಮರಣಾಂತರ ಉಪವಾಸ ಮಾಡತಕ್ಕದ್ದನ್ನು ನಿಲ್ಲಿಸಬೇಕು. ಅವರು ಉಪವಾಸ ಮಾಡತಕ್ಕದ್ದು ಕಾನೂನು ಸುಸ್ಥಿತಿಗೆ ಭಂಗ ತಂದಹಾಗೆ ಆಗುತ್ತದೆ. ಅವರು ಜೆಲಿಗೇಷನ್ ಬರಲಿ ಅವರ ಸಮಸ್ಯೆಗಳೇನು ಎಂಬುದನ್ನು ಕಂಡು ಹಿಡಿದು ಬಗೆಹರಿಸೋಣ ಅವರು ಉಪವಾಸ ನಿಲ್ಲಿಸದಿದ್ದರೆ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರು ಉಪವಾಸ ನಿಲ್ಲಿಸದಿದ್ದರೆ ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ.

(XIX) ಬೈಲ ಹೊಂಗಲ ತಾಲ್ಲೂಕು ಬೆಳವಾಡಿ ಗ್ರಾಮಕ್ಕೆ ವೈದ್ಯಾಧಿಕಾರಿಯ ನೇಮಕ.

ಶ್ರೀ ಎಸ್. ಎಚ್ ಕೌಜಲಗಿ.— ಬೈಹೊಂಗಲ ತಾಲ್ಲೂಕು, ಬೆಳವಾಡಿ ಗ್ರಾಮದಲ್ಲಿ ಕಳೆದ ಎಂಟು ತಿಂಗಳುಗಳಿಂದ ಮೆಡಿಕಲ್ ಆಫೀಸರ್ ಇರುವುದಿಲ್ಲ, ಅಲ್ಲಿನ ಜನಗಳಿಗೆ ಬಹಳ ತೊಂದರೆಯಾಗಿದೆ. ಪಾಲಿಯಿರತಕ್ಕ ಮೆಡಿಕಲ್ ಆಫೀಸರ್ ಪೋಸ್ಟನ್ನು ತುಂಬಲಿಕ್ಕೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಸದಸ್ಯರು ವೈದ್ಯರನ್ನು ನೇಮಕ ಮಾಡುವ ಬಗ್ಗೆ ಹೇಳಿದ್ದಾರೆ ಆ ವಿವರ ನನಗೆ ಗೊತ್ತಿಲ್ಲ, ಮಂತ್ರಿಗಳಿಗೆ ವಿಚಾರವನ್ನು ತಿಳಿಸಿ ಸೂಕ್ತ ಕ್ರಮ ಕೈಗೊಳ್ಳುವ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಎಸ್. ಎಚ್. ಕೌಜಲಗಿ.—ನಮಗೆ ಸರಿಯಾದ ಉತ್ತರ ದೊರೆಯುತ್ತಿಲ್ಲ.